SRI KONANDUR LINGAPPA.—It is a matter of fact. It is our life and death question-for you and for me also!

ಶ್ರೀ ಎಚ. ಎಂ. ಚನ್ನಬಸಪ್ಪ:—ಮುಳುಗಡೆಯಾಗತಕ್ಕವರಿಗೆ ಲೈಫ್ ಎಂಡ್ ಡೆತ್ ಪ್ರಶ್ನೆ ಬರುತ್ತದೆ ಅವರೇನೂ ಕಟ್ಟೆಯನ್ನು ಎತ್ತರಿಸುತ್ತೇವೆಂದು ಹೇಳಲಿಲ್ಲ. ಎತ್ತರಿಸುವ ಪ್ರಶ್ನೆ ಬಂದಾಗ ಅದರ ಸಾಧಕಬಾಧಕಗಳನ್ನು ಆಲೋಚನೆಮಾಡುತ್ತೇವೆ. ಎತ್ತರಿಸಿಬಿಡುತ್ತೇನೆಂದು ಯಾರು, ಎಲ್ಲಿ ಯಾವಾಗ ಹೇಳಿದರು?

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್:—ನಾನು ಕೇಳುವ ಪ್ರಶ್ನೆಯೇ ಬೇರೆ. ಕಟ್ಟೆಯನ್ನು ಏರಿಸುವ ಪ್ರಶ್ನೆ ಬರುತ್ತಾ ಇಲ್ಲ. ಮಳೆಗಾಲದಲ್ಲಿ ಸುಮಾರು ೯–೧೦ ಅಡಿ ಅಲ್ಲಿ ನೀರು ಒವರಫ್ಲೊ ಆಗುತ್ತದೆ. ಅದು ವೇಸ್ಟ ಆಗುತ್ತಿದೆ. ಅದನ್ನು ತಪ್ಪಿಸಿ ಆ ನೀರನ್ನು ಉಪಯೋಗಮಾಡುವುದಕ್ಕಾಗಿ ಈ ಒಂದು ಯೋಜನೆಯನ್ನು ಮಾಡುವುದರಿಂದ ಸುಮಾರು ೩–೪ ತಾಲ್ಲೂಕುಗಳಿಗೆ ನೀರು ಫೀಡ್ ಆಗುತ್ತದೆ. ಆದ್ದರಿಂದ ಈ ಯೋಜನೆಯನು ಪರಿಶೀಲನೆಮಾಡುತ್ತೀರಾ?

ಶ್ರೀ ಎಚ. ಎಂ. ಚನ್ನಬಸಪ್ಪ:—ಮಳೆಗಾಲದಲ್ಲಿ ಇಂತಹ ಲಿಫ್ಟ್ ಇರ್ರಿಗೇಷನ್ ಸ್ಕೀಂ ಲಗತ್ತಾಗುವುದಿಲ್ಲ. ಲಿಫ್ಟ್ ಇರ್ರಿಗೇಷನ್ ಸ್ಕೀಮುಗಳನ್ನು ಹಾಕಬೇಕಾದರೆ ವರ್ಷದಲ್ಲಿ ೧೨ ತಿಂಗಳುಗಳ ಕಾಲ ಮಳೆ ಬಿದ್ದರೆ ಮಾತ್ರ ಇಂತಹ ಲಿಫ್ಟ್ ಇರ್ರಿಗೇಷನ್ ಸ್ಕೀಮುಗಳಿಂದ ಇಕಾನಮಿ ಮಾಡಬಹುದು. ಆ ರೀತಿ ಮಾಡದೆ ಕೇವಲ ೬ ತಿಂಗಳು ಮಾತ್ರ ನೀರು ಹರಿಸಿದರೆ ವಿದ್ಯುಚ್ಛಕ್ತಿಮಂಡಲಿ ಇಂತಹ ಯೋಜನೆಗಳನ್ನು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ತಾವು ಹೇಳತಕ್ಕದ್ದು ಒಂದು ಪ್ರಾಕ್ಟಿಕಲ್ ಪ್ರೊಪೊಸಿಶನ್ ಅಲ್ಲ.

ಶ್ರೀ ಎಂ.ಎಚ್.ಜಯಪ್ರಕಾಶ್ ನಾರಾಯಣ.— ಮಾನ್ಯ ಮಂತ್ರಿಯವರು ಈ ಅಂಶಗಳನ್ನು ಟ್ರಿಬ್ಯೂನಲ್ ಮುಂದೆ ಇಟ್ಟಿದ್ದಾರೆ ಎಂದು ಹೇಳಿದರು. ಟ್ರಿಬ್ಯೂನಲ್ ಮುಂದೆ ಇಡುವುದಕ್ಕೆ ಮೊದಲು ಅದರಿಂದ ಎಷ್ಟು ನೀರು ವೇಸ್ಟ್ ಆಗುತ್ತದೆ, ಎಷ್ಟು ನೀರು ಉಪಯೋಗಿಸಿಕೊಳ್ಳಬಹುದು ಎಂದು ತಿಳಿದುಕೊಂಡು ಟ್ರಿಬ್ಯೂನಲ್ ಮುಂದೆ ಇಟ್ಟಿದ್ದೀರಾ ?

ಶ್ರೀ ಎಚ್. ಎನ್ ನಂಜೇಗೌಡ.— ಟ್ರಿಬ್ಯೂನಲ್ ಮುಂದೆ ಯೋಜನೆಯನ್ನು ಕಳಿಸಿ ಕೊಟ್ಟಿದ್ದೇವೆ. ಅದರ ಬಗ್ಗೆ ಮಾನ್ಯ ಮಂತ್ರಿಯವರು ಈಗಾಗಲೇ ಹೇಳಿದ್ದಾರೆ.

CONSTRUCTION OF BALEHOSUR TANK

289. Sri V. V. WAI (Shirahatti).—

Will the Minister for Public Works and Electricity be pleased to state:—

(a) when the Cabinet Sub Committee of Government accorded sanction for the construction of Balehosur Tank;

(b) the reasons for not starting the construction work of this tank even though sanction was accorded by them ?

Sri H. M. CHANNABASAPPA (Minister for Public Works and Electricity):—

(a) The Cabinet Sub-Committee of Government have not accorded sanction for the construction of Balehosur Tank.

(b) This question does not arise in view of reply above.

ಶ್ರೀ ವಿ. ವಿ. ವಾಯಿ.— ಈ ಯೋಜನೆಗೆ ಕ್ಯಾಬಿನೆಟ್ ಮಂಜೂರಾತಿ ಕೊಟ್ಟಿಲ್ಲ ಎಂದು ಹೇಳಿದ್ದೀರಿ. ಅದರ ಪಕ್ಕದಲ್ಲಿರತಕ್ಕಂತಹ ಸಿರಹಟ್ಟಿ ಮುಂತಾದ ಪ್ರದೇಶಗಳು ಅಭಾವ ಪೀಡಿತ ಪ್ರದೇಶಗಳಾಗಿರುವುದರಿಂದ ಆದಷ್ಟು ಜಾಗೃತೆ ಅದನ್ನು ಮಂಜೂರು ಮಾಡಿ ಕೊಡುತ್ತೀರಾ ?

†ಶ್ರೀ ಎಚ್. ಎಂ ಚನ್ನಬಸಪ್ಪ.— ಹಣದ ಪರಿಸ್ಥಿತಿಯನ್ನು ನೋಡಿಕೊಂಡು ಮಂಜೂರಾತಿ ಕೊಡುವುದಕ್ಕೆ ಯೋಚನೆ ಮಾಡುತ್ತೇವೆ.

TERMINATION OF SERVICES OF TEACHERS OF T.D.B. HIGH SCHOOLS

288. Sri S. M. SHEERANALY CHANDRASEKHAR (Hosanagar).—

Will the Minister for Education be pleased to state :—

(a) whether the teachers working in T.D.B. High Schools after the High Schools were taken over by the Government are placed in equal footing with those of the teachers, working in Government High Schools ;

(b) whether the Government has treated them as Government servants for all purposes;

(c) whether they have received any complaints from the teachers that they are not treated as Government servants ;

(d) whether it is a fact that services of some teachers appointed by the T.D.Bs. have been terminated by the Government ;